ಕರ್ನಾಟಕ ಸರ್ಕಾರ

ಸಂ: ವಿಜಿ.ಜಾದ.ಹರಾಜು(ಪೂ)ಸಿಆರ್/08/08-09

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು, ದಿನಾಂಕ: 23-02-2013.

## ಅಧಿಕೃತ ಜ್ಞಾಪನ

ವಿಷಯ:- ಬೆಂಗಳೂರು ಜಿಲ್ಲೆ, ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಚನ್ನಸಂದ್ರ ಗ್ರಾಮದ ಸ.ನಂ. 115ರ ಬ್ಲಾಕ್-15ರಲ್ಲಿ 0-20 ಗುಂಟೆ ಸರ್ಕಾರಿ ಜಮೀನಿನ ಬಹಿರಂಗ ಹರಾಜು ಮಾಡಿದ್ದು, ಸದರಿ 0-20 ಗುಂಟೆ ಜಮೀನನ್ನು ವಾಸದ ಉದ್ದೇಶಕ್ಕೆ ಭೂ ಪರಿವರ್ತಿಸಿ, ಹಸ್ತಾಂತರಿಸುವ ಬಗ್ಗೆ.

ಉಲ್ಲೇಖ:-
1) ಸರ್ಕಾರಿ ಜಮೀನಿನ ಹರಾಜು ಪ್ರಕಟಣೆ ಸಂಖ್ಯೆ: ವಿಜಿ.(ಹರಾಜು)ಸಿಆರ್/ಪ್ರಕಟಣೆ/07/08-09, ದಿನಾಂಕ: 28-10-2008.
2) ಬಹಿರಂಗ ಹರಾಜನ್ನು ಸ್ಥಿರೀಕರಿಸಲು ಸರ್ಕಾರದ ಪೂರ್ವಾನುಮೋದನೆ ಪತ್ರ ಸಂಖ್ಯೆ: ಆರ್‌ಡಿ 545 ಎಲ್‌ಜಿಬಿ 2008(1), ದಿನಾಂಕ: 26-12-2008.
3) ಸರ್ಕಾರದ ಪತ್ರ ಸಂಖ್ಯೆ ಆರ್.ಡಿ 1273 ಎಲ್‌ಜಿಬಿ 2007 ದಿನಾಂಕ: 25--03-2008.
4) ತಹಸೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರ ಪತ್ರ ಸಂ: ಎಲ್‌ಎನ್‌ಡಿ/ಸಿಆರ್/165/11-12, ದಿನಾಂಕ: 07-09-2012..

- * -

ಈ ಪ್ರಾಧಿಕಾರದಿಂದ ಉಲ್ಲೇಖ(1)ರನ್ವಯ ಹರಾಜು ಪ್ರಕಟಣೆ ದಿನಾಂಕ: 28-10-2008ರಂತೆ ಸಹಾಯಕ ಆಯುಕ್ತರು, (ಜಾರಿ ದಳ) ಅನಧಿಕೃತ ಕಟ್ಟಡ ನಿರ್ಮಾಣಗಳ ತಡೆ ರವರಿಂದ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಚನ್ನಸಂದ್ರ ಗ್ರಾಮದ ಸ.ನಂ. 115ರ ಬ್ಲಾಕ್-15ರಲ್ಲಿ 0-20 ಗುಂಟೆ ವಿಸ್ತೀರ್ಣದ ಸರ್ಕಾರಿ ಜಮೀನನ್ನು ದಿನಾಂಕ: 11-11-2008ರಂದು ಬಹಿರಂಗವಾಗಿ ಹರಾಜು ಮಾಡಲಾಗಿದೆ. ಅಂತಿಮ ಬಿಡ್‌ದಾರರಾದ ಶ್ರೀ ಯೂಸುಫ್ ಷರೀಫ್ ಮಾಲೀಕತ್ವದ ಮೆ: ಉಮ್ರಾ ಡೆವಲಪರ್ಸ್, ನಂ.22/1, ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ಕಾವೇರಿಯಪ್ಪ ಲೇಔಟ್, ವಸಂತನಗರ, ಬೆಂಗಳೂರು-52 ರವರು ಹರಾಜಿನ ಅಂತಿಮ ಬಿಡ್ ಮೊತ್ತ ರೂ. 71,00,000-00 (ಎಪ್ಪತ್ತೊಂದು ಲಕ್ಷ ರೂ.ಗಳು ಮಾತ್ರ) ಗಳನ್ನು ಪಾವತಿ ಮಾಡಿರುತ್ತಾರೆ.

ದಿನಾಂಕ: 11-11-2008ರಂದು ಬಹಿರಂಗವಾಗಿ ನಡೆದ ಸರ್ಕಾರಿ ಹರಾಜು ಜಮೀನನ್ನು ಸರ್ಕಾರದ ಪತ್ರ ಸಂಖ್ಯೆ: ಡಿ 545 ಎಲ್‌ಜಿಬಿ 2008(1), ದಿನಾಂಕ: 26-12-2008ರಲ್ಲಿ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ (1)ರಡಿ ಸ್ಥಿರೀಕರಿಸಿರುತ್ತೆ. ಸದರಿ 0-20 ಗುಂಟೆ ಹರಾಜು ಜಮೀನಿಗೆ ಖಾರಾಟ ಪತ್ರ ನೀಡಲಾಗಿದೆ.

ಉಲ್ಲೇಖ (4) ರಂತೆ ತಹಸೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕುರವರು, ಚನ್ನಸಂದ್ರ ಗ್ರಾಮದ ಸ.ನಂ. 115ರ ಬ್ಲಾಕ್-15ರಲ್ಲಿ 0-20 ಗುಂಟೆ ವಿಸ್ತೀರ್ಣದ ಹರಾಜು ಜಮೀನಿಗೆ ದಿನಾಂಕ: 07-09-2012ರ ಪತ್ರದಲ್ಲಿ ನಕ್ಷೆ ಹಾಗೂ ಚೆಕ್‌ಬಂದಿಯೊಂದಿಗೆ ವರದಿ ಮಾಡಿರುತ್ತಾರೆ. ಸದರಿ ಜಮೀನನ್ನು ರಿವೈಸ್ಡ್ ಮಾಸ್ಟರ್ ಪ್ಲಾನ್‌ನಂತೆ ವಾಸದ ಉದ್ದೇಶಕ್ಕೆ ಕಾಯ್ದಿರಿಸಿ, ಈ ಕೆಳಕಂಡ ಷರತ್ತಿಗೊಳಪಡಿಸಿ ಭೂ ಪರಿವರ್ತನೆ ನೀಡಲಾಗಿದೆ.

1) ಭೂ ಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.
2) ಈ ಜಮೀನಿನಲ್ಲಿ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡಗಳನ್ನು ಕಟ್ಟುವುದು.
3) ಇತರೆ ಅವಶ್ಯಕವಾದ ರಸ್ತೆ ಜಾಗ, ಮಾರ್ಜಿನ್, ಖಾಲಿ ಜಾಗ, ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ಅನುಮೋದಿಸಲ್ಪಟ್ಟ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

...2/-